1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.845/2017

ದಿ: 23.07.2019 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾ: 1

ಚಾಸಾ: 1

| | |
|---|---|
| ಹೆಸರು | : ವೆಂಕಟೇಶ್ |
| ತಂದೆಯ ಹೆಸರು | : ರಂಗಸ್ವಾಮಿ |
| ವಯಸ್ಸು | : 73 ವರ್ಷ |
| ಉದ್ಯೋಗ | : ನಿವೃತ್ತ ಆರ್ಮಿ ಆಫೀಸರ್ |
| ವಾಸ | : ಬೆಂಗಳೂರು. |

ಮುಖ್ಯ ವಿಚಾರಣೆ: ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನನಗೆ ಆರೋಪಿಗಳು ಗೊತ್ತು. ನಾನು ನೋಬಲ್ ಸಾಫ್ಟ್‌ವೇರ್ ಸಿಸ್ಟಮ್ಸ್ ಪ್ರೈವೇಟ್ ಲಿ. ಕಂಪನಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಎಂದು ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. 1ನೇ ಆರೋಪಿ ಸದರಿ ಕಂಪನಿಯಲ್ಲಿ ಪ್ರೊಡಕ್ಷನ್ ಮ್ಯಾನೇಜರ್ ಆಗಿ, 2ನೇ ಆರೋಪಿ ಡೆಪ್ಯುಟಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿ, 3ನೇ ಆರೋಪಿ ಸೀನಿಯರ್ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆರೋಪಿಗಳು ನಮ್ಮ ಕಚೇರಿಯಲ್ಲಿ ಅವರ ವ್ಯವಹಾರ ಮಾಡಲು ಬೇರೆ ಗಿರಾಕಿಗಳನ್ನು ಪಡೆಯಲು ನಮ್ಮ ಕಂಪನಿಯ ಕಂಪ್ಯೂಟರ್ ಹಾಗೂ ಇತರೆ ಸಾಫ್ಟ್‌ವೇರ್‌ಗಳನ್ನು ಉಪಯೋಗಿಸಿಕೊಂಡು ಪ್ರಯತ್ನ ಪಟ್ಟರು. ಇದರಿಂದ ನಮ್ಮ ಕಂಪನಿಗೆ ತುಂಬಾ ನಷ್ಟ ಉಂಟಾಗಿರುತ್ತದೆ. ಈ ಸಂಬಂಧವಾಗಿ ನಮ್ಮ ಕಂಪನಿಯಲ್ಲಿ ಆರೋಪಿಗಳ ವಿರುದ್ಧ ಮುನಾಲ್ ಕುಮಾರ್‌ಸಿಂಗ್‌ರವರು ತನಿಖೆಯನ್ನು ಮಾಡಿರುತ್ತಾರೆ. ಆ ನಂತರ ಆರೋಪಿಗಳಿಗೆ ದೋಷರೋಪಣೆ ಪಟ್ಟಿಯನ್ನು ಕೊಟ್ಟಿರುತ್ತಾರೆ. ಆ ನಂತರ ಈ

ಸಂಬಂಧ ಆರೋಪಿಗಳು ಜವಾಬು ನೀಡಿರುತ್ತಾರೆ. ಸದರಿ ಜವಾಬನ್ನು ನಿರಾಕರಿಸಲಾಗಿದೆ. ಆ ನಂತರ ಆರೋಪಿಗಳ ವಿರುದ್ಧ ತನಿಖೆಯನ್ನು ನಡೆಸಲು ನನ್ನನ್ನು ತನಿಖಾಧಿಕಾರಿಯಾಗಿ ನೇಮಿಸಿ ತನಿಖೆಯನ್ನು ಮಾಡುವಂತೆ ಆದೇಶಿಸಿರುತ್ತಾರೆ. ಆ ನಂತರ ನಾನು ಅವರ ವಿರುದ್ಧ ತನಿಖೆಯನ್ನು ನಡೆಸಿರುತ್ತೇನೆ. ತನಿಖೆ ನಡೆದ ನಂತರ ಆರೋಪಿಗಳ ವಿರುದ್ಧ ಕ್ರಮ ಜರುಗಿಸುವಂತೆ ವರದಿಯನ್ನು ಕೊಟ್ಟಿರುತ್ತೇನೆ. ನನ್ನ ವರದಿಯಲ್ಲಿ ನಾಲ್ಕು ಆರೋಪಿಗಳಾದ 1ನೇ ಆರೋಪಿಯ ವಿರುದ್ಧ 25 ಲಕ್ಷ ರೂ, 2ನೇ ಆರೋಪಿಗೆ ಎರಡುವರೆ ಲಕ್ಷ ರೂ, 3ನೇ ಆರೋಪಿಗೆ ಎರಡುವರೆ ಲಕ್ಷ ರೂ ಹಣವನ್ನು ಪಾವತಿ ಮಾಡಬೇಕೆಂದು ತಿಳಿಸಿರುತ್ತೇನೆ. ದಿಃ 02.12.2015 ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ಪೊಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದೆ. ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು, ಅದೇ ದಿನ ಮಧ್ಯಾಹ್ನ 2.00 ಗಂಟೆಯ ಸಮಯಕ್ಕೆ ಪೊಲೀಸ್‌ನವರು ನಮ್ಮ ಕಾರ್ಖಾನೆಗೆ ಬಂದು ಸ್ಥಳ ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್‌ನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸ್‌ನವರಿಗೆ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ. ಈಗ ನನಗೆ ತೋರಿಸಿದಂತಹ ದಾಖಲೆ ನಮ್ಮ ಕಂಪನಿಯಲ್ಲಿದ್ದಂತಹ ಕಂಪ್ಯೂಟರ್‌ನಿಂದ ಸಿಸ್ಟಂ ಅಡ್ಮಿನಿಸ್ಟ್ರೇಟರ್‌ರವರು ಪ್ರಿಂಟ್ ಔಟ್‌ಗಳನ್ನು ತೆಗೆದುಕೊಂಡಿರುತ್ತಾರೆ. 19 ಪ್ರಿಂಟ್ ಔಟ್‌ಗಳಿಂದು ಅವುಗಳನ್ನು ನಿಪಿ.5 ರಿಂದ ನಿಪಿ.23 ಎಂದು ಗುರುತಿಸಲಾಯಿತು. ಸೆಲ್ವಕುಮಾರ್‌ರವರ ಇನ್‌ವಾಯಿಸ್ ಇದ್ದು ಅದನ್ನು ನಿಪಿ.24 ಎಂದು, ಎ1 ಆರೋಪಿಗೆ ಸಂಬಂಧಪಟ್ಟ ಚಾರ್ಜ್ ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಿಪಿ.25 ರಿಂದ ನಿಪಿ.30 ಎಂದು, 2ನೇ ಆರೋಪಿಗೆ ಸಂಬಂಧಪಟ್ಟ ವಜಾ ಆದೇಶವನ್ನು ನಿಪಿ.31 ಎಂದು, ಆರೋಪಿಗಳ ಮೇಲೆ ನಡೆದಂತಹ ತನಿಖೆಯ ಆದೇಶದ

ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.32 ಎಂದು, ತನಿಖೆಯ ವರದಿಯನ್ನು ನಿಪಿ.33 ಎಂದು, 2ನೇ ಆರೋಪಿ ಕೊಟ್ಟಂತಹ ಹಿಂಬರಹವನ್ನು ನಿಪಿ.34 ಎಂದು, ನಾನು ಆರೋಪಿಗೆ ಕೊಟ್ಟಂತಹ ನೋಟೀಸ್‌ನಗಳ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.35 ರಿಂದ ನಿಪಿ.37 ಎಂದು, ತನಿಖೆಯ ನಡವಳಿಕೆಗಳ ನಕಲನ್ನು ನಿಪಿ.38 ಎಂದು (6 ಪುಟಗಳು), 2ನೇ ಆರೋಪಿಗೆ ಸಂಬಂಧಪಟ್ಟ ಸ್ಕ್ರೀನ್ ಶಾರ್ಟ್‌ನ್ನು ನಿಪಿ.39 ಎಂದು, ನನ್ನನ್ನು ತನಿಖಾಧಿಕಾರಿಯಾಗಿ ನೇಮಿಸಿರುವ ಆದೇಶವನ್ನು ನಿಪಿ.40 ಎಂದು, 2ನೇ ಆರೋಪಿಗೆ ಸಂಬಂಧಿಸಿದ ಚಾರ್ಜ್ ಶೀಟ್‌ನ್ನು ನಿಪಿ.41 ಎಂದು, 3ನೇ ಆರೋಪಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನಿಪಿ.42 ಎಂದು(21 ಪುಟಗಳು) ಗುರುತಿಸಲಾಯಿತು. ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

ಪಾಟೀ ಸವಾಲು: ಕೋರಿಕೆಯ ಮೇರೆಗೆ ಪಾಟಿ ಸವಾಲಿಗೆಂದು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ

**ಪಿಡಬ್ಲ್ಯೂ: 1**